# ಕಲ್ಯಾಣ ಪ್ರಣತಿ

12ನೇ ಶತಮಾನ ಚರಿತ್ರೆಯಲ್ಲಿ ವಿಶೇಷ ಕಾಲಘಟ್ಟ. ಹಾಗೆ ಹೇಳುವುದಾದರೆ ಗತಿಸಿಹೋದ ಚರಿತ್ರೆಯ ಅಧ್ಯಯನದಲ್ಲಿ ನಾವು ನಿರೀಕ್ಷಿಸದೆ ಇರುವ ಹೊಸ ಸಂಗತಿಗಳು, ಅಲಕ್ಷ್ಯಕ್ಕೆ ಒಳಗಾದ ಘಟನೆಗಳು ನಮ್ಮ ನಡಿಗೆಯನ್ನು ಒಂದು ಕ್ಷಣ ನಿಲ್ಲಿಸಿದರೂ ಮುಂದಿನ ನಡಿಗೆಗೆ ಬೇಕಾದ ಹೊಸ ಹೊಳಹುಗಳು ಇದ್ದಕ್ಕಿದ್ದಂತೆ ಗೋಚರವಾಗಿ ಬಿಡಬಹುದು. ಚರಿತ್ರೆಗೆ ಕೇವಲ ಒಂದು ಮುಖವಿಲ್ಲ. ಅದು ಅವರವರ ವಿಚಾರಗಳಿಗೆ, ನಂಬಿಕೆಗಳಿಗೆ ತಕ್ಕಂತೆ ರೂಪುಗೊಳ್ಳುತ್ತದೆ. ಕೆಲವು ಬಾರಿ ಬರೆಯುವ ಚರಿತ್ರಕಾರನ ಪ್ರೀತಿ, ಭಕ್ತಿಯೂ ಕೂಡ ಏಕಮುಖವಾದ ಚಿತ್ರಣಕ್ಕೆ ತೊಡಗುವಂತೆ ಮಾಡಿಬಿಡಬಹುದು. ಹೀಗಾಗಿ ಚರಿತ್ರೆಯೆನ್ನುವುದು ಇಂದಿನ ನಡೆಗೆ ಬೆಳಕು ತೋರಬಲ್ಲ ಒಂದು ಆಕರವಾಗಿ ನಿಲ್ಲಬಲ್ಲ ಸಾಧ್ಯತೆಯೂ ಹೌದು.

ವಚನ ಚಳವಳಿ ಅಥವಾ ಶರಣರ ಚಳವಳಿ ಎನ್ನುವುದು ಸಾಹಿತ್ಯಕ್ಕಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ನಡೆದ ಚಳವಳಿ. ಮುಖ್ಯವಾಗಿ ಇದೊಂದು ಜನಪರ ಚಳವಳಿಯಾಗಿದ್ದು ಅದರ ಕೇಂದ್ರದಲ್ಲಿ ನಿಂತವರು ವಿವಿಧ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡ ಶ್ರಮಜೀವಿಗಳಾಗಿದ್ದರು. ದುಡಿಯುವ ವರ್ಗದವರಿಗಾಗಿಯೇ ಹಲವಾರು ಸೈದ್ಧಾಂತಿಕ ನಿಲುವುಗಳು ರೂಪಿಸಲ್ಪಟ್ಟಿರುವ ಇಂದಿನ ಯುಗದಲ್ಲಿ ನಿಂತು ಅಂದಿನ ಯುಗವನ್ನು ನೋಡಿದರೆ ಅಚ್ಚರಿ. ರೋಮಾಂಚನ ಸಹಜವಾಗಿಯೇ ಉಂಟಾಗುತ್ತದೆ. ಬಸವ ಕೇಂದ್ರದಲ್ಲಿ ನಿಂತು ನಡೆದ ಈ ಚಳವಳಿಯಲ್ಲಿ ಭಾಗಿಯಾದವರು ಸಮಾಜದ ಶ್ರೇಷ್ಠ ಕುಲದವರನ್ನು ಒಳಗೊಂಡಂತೆ ಅಂತ್ಯಜರು, ಮಹಿಳೆಯರು ಸಹ ಕಂಡುಬರುತ್ತಾರೆ.

ಒಂದು ಕಡೆ ಜೈನರು, ಮತ್ತೊಂದು ಕಡೆ ಪುರೋಹಿತಶಾಹಿಗಳ ಸನಾತನ ಪ್ರಜ್ಞೆಯ ಹೇರುವಿಕೆ, ದಬ್ಬಾಳಿಕೆಗಳಲ್ಲಿ ನಲುಗಿಹೋದ ಚರಿತ್ರೆಯ ದಾಖಲಾತಿಗೆ ಅರ್ಹರಲ್ಲದ ವರ್ಗವೊಂದು ತನ್ನ ಅಸ್ತಿತ್ವದೊಂದಿಗೆ ನಡೆಸಿದ ಬಹುದೊಡ್ಡ ಹೋರಾಟ ಅದಾಗಿತ್ತು. ತಾನು ಹುಟ್ಟಿದ ಕುಲದ ಹಂಗನ್ನು ತೊರೆದು ಕುಲಾತೀತವಾದ, ಕಾಲಾತೀತವಾದ, ಬದುಕನ್ನೇ ಪ್ರಯೋಗಶಾಲೆಯನ್ನಾಗಿಸಿಕೊಂಡ ಬಸವಣ್ಣ ಈ ಹೋರಾಟದ ನೇತೃತ್ವವಹಿಸಿದರು. ತಮ್ಮ ತಮ್ಮ ಕುಲದ ಹಂಗನ್ನು ತೊರೆದ ಈ ದಿಕ್ಕುಗೆಟ್ಟ ಸಮೂಹಕ್ಕೆ ಬಸವಣ್ಣ ಕೆಲವು ರೀತಿ ನೀತಿಗಳನ್ನೊಳಗೊಂಡ ನಿಯಮಾವಳಿಗಳನ್ನು ರೂಪಿಸಿದ ಕಾಯಕ, ದಾಸೋಹ, ದೇಹವೇ ದೇಗುಲವೆಂಬ ಈ ಸರಳ ವ್ರತಾಚರಣೆಗಳು ಎಲ್ಲರಿಗೂ ನಿಲುಕುವಂತಹವಾಗಿದ್ದವು.

ಕಾಯಕ ಜೀವಿಗಳು ತಮ್ಮ ಕಾರ್ಯ ಎಂತಹದ್ದೇ ಇರಲಿ ಅದು ತಮಗೆ ಅಭಿಮಾನ ತರುವಂತದ್ದು ಎಂದು ನಂಬಿದ್ದರು. ಕಾರ್ಯ ಮಾಡುತ್ತಲೇ ದೈವವನ್ನು ಒಲಿಸುವ ಪರಿ ಹೇಗೆ ಎಂಬ ಜಿಜ್ಞಾಸೆ ನಡೆಸಿದ್ದರು. ಖಾಸಗಿ ಸಂಪತ್ತಿನ ಶೇಖರಣೆಗೆ ಶರಣರು ವಿರುದ್ಧವಾಗಿದ್ದರು. ಅಂದಂದಿನ ಅಗತ್ಯಕ್ಕೆ ತಕ್ಕಂತೆ ದುಡಿಮೆಯನ್ನು ಉಳಿಸಿಕೊಂಡು ಉಳಿದಿದ್ದನ್ನು ಇಲ್ಲದವರಿಗೆ ಕೊಡುವ ವ್ರತವನ್ನು ಅವರು ಸ್ವೀಕರಿಸಿದ್ದರು. ಹೀಗಾಗಿ ದುಡಿಮೆಯ ಜೊತೆಗೆ ಕಲ್ಯಾಣದ ಭಂಡಾರವೂ ಶ್ರೀಮಂತವಾಗ ತೊಡಗಿತ್ತು. ದೈವದ ಹೆಸರಿನಲ್ಲಿ, ಆಚರಣೆಯ ಹೆಸರಿನಲ್ಲಿ ಶರಣರು ಛಿದ್ರವಾಗದಂತೆ ಕಾಪಾಡಿದ್ದು 'ದೇಹವೇ ದೇಗುಲವೆಂಬ ಹೊಸ ಕಲ್ಪನೆ. ಬಸವಣ್ಣನ ಪ್ರಸಿದ್ಧ ವಚನ ದೈವ ಮತ್ತು ಅದರ ವಾಸ ಸ್ಥಾನದ ಬಗ್ಗೆ ಕಟ್ಟಿಕೊಟ್ಟ ಚಿತ್ರಣ ಹೀಗಿದೆ.

'ಉಳ್ಳವರು ಶಿವಾಲಯವ ಮಾಡುವರು/ ನಾನೇನು ಮಾಡಲಿ ಬಡವನಯ್ಯ?/ ಎನ್ನ ಕಾಲೇ ಕಂಬ ದೇಹವೆ ದೇಗುಲ/ಶಿರವೇ ಹೊನ್ನ ಕಳಸವಯ್ಯ!'

ದೇಹದ ಭಾಗಗಳನ್ನೇ ಆಧಾರವಾಗಿಸಿ ರೂಪಿಸಿದ ವೈದಿಕ, ಕ್ಷತ್ರಿಯ, ಶೂದ್ರ ಮುಂತಾದ ವರ್ಣವ್ಯವಸ್ಥೆಗೆ ಎದುರಾಗಿ ದೇಹವನ್ನೇ ದೇಗುಲವಾಗಿಸಿದ್ದು ಶರಣ ಚಳವಳಿಯ ಬಹುದೊಡ್ಡ ಸಾಧನೆ. ದೇಹವನ್ನೇ ಕಾಯಕದ ಕೇಂದ್ರವಾಗಿಸಿದ್ದು, ಈ ದೇಹದಲ್ಲಿಯೇ ಗರ್ಭಗುಡಿಯಿಂದ ದೈವವನ್ನು ಸ್ಥಳಾಂತರಿಸಿದ್ದು ಆ ಕಾಲಕ್ಕೆ ಕ್ರಾಂತಿಕಾರಕವಾದ ಚಿಂತನೆಯಾಗಿತ್ತು. ಈ ದೊಡ್ಡ ಜನಾಂದೋಲನದಲ್ಲಿ ಕಾಶ್ಮೀರದ ದೊರೆಯಾಗಿದ್ದು ಶರಣನಾದ ಮೋಳಿಗೆ ಮಾರಯ್ಯನನ್ನು ಒಳಗೊಂಡಂತೆ ಸೂಳೆ ಸಂಕವ್ವನಂತಹ ಸಾಮಾನ್ಯ ಹೆಣ್ಣುಮಕ್ಕಳು ಇದ್ದರು. ಚೋರ ಚಿಕ್ಕಯ್ಯನನ್ನು ಒಳಗೊಂಡಂತೆ ಕದಿರ ತಿಮ್ಮವ್ವೆಯೂ ಇದ್ದಳು. ಹೊಸ ರೀತಿಯ ಘನತೆಯ ಬದುಕನ್ನು ಪಡೆದ ವಿಶ್ವಾಸ, ತಾವೇ ಹಾಸಿದ ನಡೆ ನುಡಿಯೆಂಬ ಹಾಸಿನ ಮೇಲೆ ನಡೆಯುವ ಛಲ ಈ ಶರಣರಿಗಿತ್ತು.

ಶರಣಸತಿ–ಲಿಂಗಪತಿ ಎಂಬ ಕಲ್ಪನೆ ಶರಣರೆಲ್ಲರೂ ತಮ್ಮನ್ನು ಸತಿಯನ್ನಾಗಿ ಕಂಡುಕೊಳ್ಳುವ, ಲಿಂಗವನ್ನು ಪತಿಯನ್ನಾಗಿ ಕಂಡುಕೊಳ್ಳುವ ಏಕನಡಾವಳಿಯ ಕಲ್ಪನೆಯಾಗಿತ್ತು. 'ಸತಿಪತಿಗಳೊಂದಾದ ಭಕ್ತಿ ಶಿವನಾಗಿ ಹಿತವಾದುದು' ಎಂಬ ನಂಬಿಕೆ ಹೆಣ್ಣು ಗಂಡಿನ ದಾಂಪತ್ಯ ಧರ್ಮವನ್ನು ಹೊಸ ರೀತಿಯಲ್ಲಿ ನಿರ್ದೇಶಿಸಿತು. ಆಧ್ಯಾತ್ಮಿಕ ಸಾಧನೆಗಳಲ್ಲಿ ಮುಟ್ಟು–ಗರ್ಭವೇ ಕಾರಣವಾಗಿ ಶೂದ್ರಳೆಂದು ಪರಿಗಣಿತಳಾದ ಹೆಣ್ಣು ಪತಿಯೊಂದಿಗೆ ಸರಿಸಮನಾಗಿ ಸ್ಥಾನ ಪಡೆದಳು. ಈ ಕಾಲಘಟ್ಟದಲ್ಲಿ ಪಡೆದ ಈ ಗೌರವ–ಸನ್ಮಾನಗಳು ಚರಿತ್ರೆಯನ್ನು ಮತ್ತೆ ಮತ್ತೆ ಹೊರಳಿ ನೋಡುವಂತೆ ಮಾಡುತ್ತದೆ. ಮಹಿಳೆಯರು ನಿರ್ಭೀತವಾಗಿ, ದಿಟ್ಟವಾಗಿ ಮಾತನಾಡಬಲ್ಲವರೂ, ವಚನಗಳ ಮೂಲಕ ಭಾವಾಭಿವ್ಯಕ್ತಿ ಮಾಡಬಲ್ಲರೂ ಆಗಿದ್ದಲ್ಲದೆ ಶರಣ ಚಳವಳಿಯಲ್ಲಿ ತಮ್ಮ ಹೆಸರನ್ನು ದಾಖಲಿಸಿದರು. ಕೆಲವೊಮ್ಮೆ ಈ ವ್ರತ, ಆಚರಣೆಗಳು ನೀರಸವೆನಿಸುವಷ್ಟರ ಮಟ್ಟಿಗೆ ರಾರಾಜಿಸಿದರೂ ಒಂದು ತತ್ವಕ್ಕೆ, ಸಿದ್ಧಾಂತಕ್ಕೆ ಬದ್ಧರಾಗದೆ ಚಳವಳಿಯೊಂದು ಯಶಸ್ವಿಯಾಗುವುದಿಲ್ಲ ಎಂಬ ನಿಷ್ಠುರ ಸತ್ಯವನ್ನು ಕಣ್ಣ ಮುಂದೆ ನಿಲ್ಲಿಸುತ್ತದೆ. ಶರಣರ ಸಮಾಜದ ಸಮಾನತೆ, ಭಾತೃತ್ವದ ಕನಸು ಇಂದಿಗೂ ಪ್ರಸ್ತುತವಾಗಿದೆ, ಜೀವಂತವಾಗಿದೆ ಎಂಬುದಕ್ಕೆ ಕರ್ನಾಟಕದಾದ್ಯಂತ ನಡೆಯುತ್ತಿರುವ 'ಮತ್ತೆ ಕಲ್ಯಾಣ' ಎಂಬ ಅಭಿಯಾನ ಸಾಕ್ಷಿಯಾಗಿದೆ. ಇದರ ನೇತೃತ್ವವನ್ನು ಪ್ರಗತಿಪರ ಚಿಂತನೆಗಳನ್ನುಳ್ಳ ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ವಹಿಸಿದ್ದಾರೆ.

■ **ಅಮೃತಮತಿ**

## ಮಾತೇ ಮುತ್ತು

- ಸಂತೋಷ ಶ್ರೀಮಂತನ ಸ್ವತ್ತಲ್ಲ.

  —ಹೋರಸ್

- ಅಗಣಿತ ತಪ್ಪುಗಳ ನಂತರವೇ ಯಶಸ್ಸು ಸಾಧ್ಯ.

  —ಜಾರ್ಜ್ ಬರ್ನಾಡ್ ಶಾ

- ಏಕಾಂಗಿಗಳಿಗೆ ಮಾತ್ರ ಸ್ನೇಹದ ಸವಿ ಗೊತ್ತು.

  —ಮಿಲ್ ಕ್ಯಾಥರ್

- ಕಾಯವೇ ಕೈಲಾಸ ಕಾಣಿರಣ್ಣ.

  —ಅಲ್ಲಮಪ್ರಭು

- ಸಾವರ್ ಜನಕ್ಕೆ ಸಾವರ್ ದೇವ್ರು, ಬಡವನ ದೇವ್ರು ವೊಟ್ಟೆ.

  —ಜಿ.ಪಿ. ರಾಜರತ್ನಂ

- ನೀರಿಗಿಂತ ಹೆಚ್ಚಿನದಿಲ್ಲ. ಅದು ಹಾಲಿನೊಡನೆ ಬೆರೆತ ಮಾತ್ರದಿಂದಲೇ ತಾನು ನಾಶವಾದರೂ ಸರಿ ಹಾಲನ್ನು ಹೆಚ್ಚಿಸುತ್ತದೆ ಮತ್ತು ಕಾಪಾಡುತ್ತದೆ.

  —ಸೋಮದೇವ

- ಯಾವುದನ್ನಾದರೂ ಯಾರನ್ನಾದರೂ ಏಕೆ ಪ್ರೀತಿಸುತ್ತೇನೆ ಎಂಬುದಕ್ಕೆ ವಿವರಣೆ ಕೊಡಲಾರೆ.

  —ವಾಲ್ಟ್ ವ್ಹಿಟ್ಮನ್

- ರಾವಣನಿಂದ ಹಿಡಿದು ಇಕ್ಬಾಲ್ ಸಾಹೇಬನವರೆಗೆ ಎಲ್ಲ ಪ್ರೇಮಿಗಳೂ ಪೆದ್ದರೆ– ಹೆತ್ತವರಹಾಗೆ, ಋಷಿಗಳ ಹಾಗೆ, ಪ್ರಕೃತಿಯ ಹಾಗೆ.

  —ಪಿ. ಲಂಕೇಶ್